

ಕಂಬಾರರ ಪದ್ಯದ ಈ ಮುಂದಿನ ಸಾಲುಗಳು ಇಲ್ಲಿ ಮತ್ತೆ ನೆನಪಾಗುತ್ತವೆ:

**‘ಐದು ನಿಮಿಷಗಳಲ್ಲೆ ಐವತ್ತರ ಬೆಳವಣಿಗೆ ಬೆಳೆದು/ಮೂಡು ಪಡುವಣ ದೇಶಾಂತರ ಚರಿಸಿ/ ವೇಷಾಂತರ ನಟಿಸಿ/ ತಾರಾಮಾರು ಹಾರಾಡುತ್ತ/ ಅಟ್ಟವನೇರಿ ತಕ್ಕತ್ತೈ ಎಂದು ನೀನಂದೆ ನೋಡು.’**

ನಾಗರಾಜರ ವೃತ್ತಿಜೀವನದಲ್ಲಿ ಗಮನಿಸಬೇಕಾದ ಇನ್ನೊಂದು ಮುಖ್ಯ ವಿಚಾರವಿದೆ: ಭಾರತದಂತಹ ಪಶ್ಚಿಮೇತರ ಸಂಸ್ಕೃತಿಯಲ್ಲಿ ವಿದ್ವಾಂಸನಾಗಿ (ಆಧುನಿಕ ಅರ್ಥದಲ್ಲಿ) ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲಾಗುವುದು ಸಾಮಾನ್ಯ